# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಬಿ.ಭರಮಪ್ಪ, ಹಿಂದಿನ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ವಿಚಾರಣೆ – ಅಂತಿಮ ಆದೇಶ ಹೊರಡಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:689:ಗ್ರಾಪಂಕಾ:2016, ದಿನಾಂಕ:22-12-2016.
2. ಅಪರ ನಿಬಂಧಕರು, ವಿಚಾರಣೆಗಳು-09, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರವರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:UPLOK-2/DE/772/2016/ARE-09, ದಿನಾಂಕ:25–08–2018.
3. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ:UPLOK-2/DE/772/2016/ARE-09, ದಿನಾಂಕ:29–08–2018.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:UPLOK-2/DE/772/2016/ARE-09, ದಿನಾಂಕ:29–08–2018.
5. ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ/689/ಗ್ರಾಪಂಕಾ/2016, ದಿನಾಂಕ:28–09–2018.
6. ಶ್ರೀ ಬಿ.ಭರಮಪ್ಪ, ಹಿಂದಿನ ಕಾರ್ಯದರ್ಶಿ, ಇವರು ಸರ್ಕಾರದ ಎರಡನೇ ಕಾರಣ ಕೇಳುವ ನೋಟೀಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ:31–10–2018.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಬಿ.ಭರಮಪ್ಪ, ಹಿಂದಿನ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14–ಎ ರನ್ವಯ ಮಾನ್ಯ ಉಪಲೋಕಾಯುಕ್ತರವರಿಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ:689:ಗ್ರಾಪಂಕಾ:2016, ದಿನಾಂಕ:22–12–2016 ರಲ್ಲಿ ವಹಿಸಲಾಯಿತು. ಅದರಂತೆ ಅಪರ ನಿಬಂಧಕರು, ವಿಚಾರಣೆಗಳು-09, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ ನಿಯಮ 11 ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

ದೋಷಾರೋಪಣೆ:

"ಆಪಾದಿತ ಸರ್ಕಾರಿ ನೌಕರರಾದ ಇವರು – ಈಗಾಗಲೇ ಸಾಕಷ್ಟು ಪ್ರಕರಣಗಳಲ್ಲಿ ಮರಣ ಶಾಸನ ಆಧಾರದಲ್ಲಿ ಕಂದಾಯ ಅಧಿಕಾರಿಗಳು ಖಾತಾ ಬದಲಾವಣೆ ಮಾಡಬಾರದೆಂದು ನಿರ್ದೇಶನಗಳು ಇದ್ದರೂ ಸಹ ಉಲ್ಲಂಘಿಸಿ ಗ್ರಾಮ ಪಂಚಾಯತ್ ಖಾತಾ ನಂ.88ಕ್ಕೆ ಸಂಬಂಧಪಟ್ಟಂತೆ ಕರ ಆಕರಣೆಯ ರಿಜಿಸ್ಟರನ್ನು ಪರಿಶೀಲಿಸಿದಾಗ ಅಲೀಮಾ ನಿಸಾರಹ್ಮದ ಎನ್ನುವ ಹೆಸರಿನಲ್ಲಿದ್ದ ಖಾತಾವನ್ನು ಮರಣ ಶಾಸನ ಪತ್ರದ ಆಧಾರದ ಮೇಲೆ ನೂರುನಿಸಾ ಬೇಗಂ ರವರಿಗೆ ಬದಲಾವಣೆಯಾಗಿರುತ್ತದೆ.

ಆದ್ದರಿಂದ ಇವರು ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತಾರೆ".

ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ವರದಿಯಲ್ಲಿ ಶ್ರೀ ಬಿ.ಭರಮಪ್ಪ, ಹಿಂದಿನ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿದೆಯೆಂದು ನಿರ್ಣಯಿಸಿರುತ್ತಾರೆ. ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತರವರು ಅಂಗೀಕರಿಸಿ ಶ್ರೀ ಬಿ.ಭರಮಪ್ಪ, ಹಿಂದಿನ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಆಪಾದನೆ ಸಾಬೀತಾಗಿರುವುದರಿಂದ ಹಾಗೂ ಇವರು ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(a) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಸದರಿಯವರ **"ಪಿಂಚಣಿಯಲ್ಲಿ ಶೇ.05 ರಷ್ಟು ಮೊತ್ತವನ್ನು 10 ವರ್ಷಗಳ ಅವಧಿಯವರೆಗೆ ತಡೆಹಿಡಿಯುವ"** ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಈ ಸಂಬಂಧ ಶ್ರೀ ಬಿ.ಭರಮಪ್ಪ, ಹಿಂದಿನ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರಿಗೆ ನಿಯಮಾನುಸಾರ ಕ್ರಮಸಂಖ್ಯೆ (5)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ನೋಟೀಸ್‌ನ್ನು ಜಾರಿಗೊಳಿಸಲಾಗಿತ್ತು. ಈ ನೋಟಿಸಿಗೆ ಅವರು ಮೇಲೆ ಕ್ರಮ ಸಂಖ್ಯೆ (6) ರಲ್ಲಿ ಓದಲಾದ ಮನವಿ ಮೂಲಕ ತಮ್ಮ ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ಸದರಿಯವರ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಗಿದ್ದು, ಸದರಿಯವರು ಅವರ ವಿರುದ್ಧ ಮಾಡಲಾದ ಎಲ್ಲಾ ಆರೋಪಗಳನ್ನು ತಳ್ಳಿಹಾಕಿರುತ್ತಾರೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಲು ಪ್ರಮುಖವಾಗಿ ವರದಿಯ ಕಂಡಿಕೆಯಲ್ಲಿ ಮೇಲ್ಕಂಡ ಅಂಶಗಳನ್ನು ಅಲ್ಲಗಳೆಯಲು ಸಮರ್ಥವಾದ ಕಾರಣಗಳನ್ನು ನೀಡಿರುತ್ತಾರೆ. ಅವುಗಳ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ.

The above said all documents and evidence of PW1 and DW1 clearly reveals that the DGO No.1 and 2 without issuing notice to the complainant who is the neighboring owner of the disputed property and who disputed measurement of the property which stands in the name of Noor Unnisa Begum, they have changed the Khata into the name of the Smt.Haleema Nissar Ahmed on the basis of unregistered will dated 02-05-2009 without passing the mutation order. Hence, the defense of DGO No.2 that is "he has not changed the Khata but he just referred the application of Smt. Haleema to the DGO No.1 to conduct the spot inspection and submit the report" is not acceptable. The duty of the DGO No.2 is also verify the stage of the said application and what action has been taken by the DGO No.1 and why he has not been submitted the report.

In the citation reported in 2002 AIR.Kar.1894 (FB), ILR 2002 Kar. 2750(FB) C.C. Nagendra Singh v/s the Special Deputy Commissioner, Bangalore District and others. Hon'ble High Court full bench is pleased to held that;

**"Considering Rule 43 when a person claims title to a property under a will for the purpose of getting a mutation entry in the revenue records before any such entry is made the Revenue Court should prima facie be satisfied that the said document is genuine and valid even in the absence of any dispute as the said will comes in the way of natural succession. By virtue of Section 128 when the owner of the land dies, the title to the said property passed on to the legal heir by succession or survivorship or inheritance and the property vests with such a legal heir without there being any document and purely based on the relationship of the deceased with the legal heir. A will can come into operation only after the death of the executants. If a will is set up to deprive a legal heir who had acquired title to the property either by succession, survivorship**

**or inheritance, the person claiming under the will has to show better title. If the will is disputed strict proof of will as required under Section 63 and 64 of the Succession Act is to be provided. When the revenue Court is prevented from recording the statement of the parties and the depositions, the question of establishing the genuineness of the will for any purpose whatsoever before the revenue Court an enquiry would not arise. Under these circumstances the revenue Courts have no jurisdiction to go into the genuineness or validity of the will or to the question of title in respect of the land in dispute. The decision of the Revenue Court has to be necessarily based on the undisputed facts. The Revenue Court cannot go into the disputed questions of relationship, status of the parties title to the fraud, undue influence, misrepresentation or mistake. As such, the petitioner cannot take advantage of Rule 43 of Karnataka Land Revenue Rules in the case of a Will."**

Considering the above said oral and documentary evidence along with the above said citation of Hon'ble High Court the DGOs not following the procedure at the time of disposing the application filed by Smt. Haleema Nissar Ahmed W/o J.F Nissar Ahmed and changed the Khata into her name. The said act of the DGOs amounts to dereliction of duty and misconduct.

Considering above all facts and circumstances, with documents there is not sufficient material from the side of the DGO No.1 and 2 to disprove the charge leveled against them.

In the above said facts and circumstances, the charge leveled against the DGO No.1 and 2 is proved. Hence, this report is submitted to Hon'ble Uplokayuktha for further action.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಆರೋಪದ ತೀರ್ವತೆಗೆ ಅನುಗುಣವಾಗಿ ಶ್ರೀ ಬಿ.ಭರಮಪ್ಪ, ಹಿಂದಿನ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಆಪಾದನೆ ಸಾಬೀತಾಗಿರುವುದರಿಂದ ಹಾಗೂ ಇವರು ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(a) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಸದರಿಯವರ **"ಪಿಂಚಣಿಯಲ್ಲಿ ಶೇ.05 ರಷ್ಟು ಮೊತ್ತವನ್ನು 10 ವರ್ಷಗಳ ಅವಧಿಯವರೆಗೆ ತಡೆಹಿಡಿಯುವ"** ದಂಡನೆ ವಿಧಿಸಲು ಮಾನ್ಯ ಉಪಲೋಕಾಯುಕ್ತರು ತಮ್ಮ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ವಿಚಾರಣಾಧಿಕಾರಿಯವರು ಆಪಾದನೆಯನ್ನು ಸಾಬೀತುಪಡಿಸಲು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿರುತ್ತವೆ. ಆದುದರಿಂದ ಸರ್ಕಾರವು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಪರಿಶೀಲಿಸಿ, ಶ್ರೀ ಬಿ.ಭರಮಪ್ಪ, ಹಿಂದಿನ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಆಪಾದನೆ ಸಾಬೀತಾಗಿರುವುದರಿಂದ ಹಾಗೂ ಇವರು ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(a) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಸದರಿಯವರ **"ಪಿಂಚಣಿಯಲ್ಲಿ ಶೇ.05 ರಷ್ಟು ಮೊತ್ತವನ್ನು 10 ವರ್ಷಗಳ ಅವಧಿಯವರೆಗೆ ತಡೆಹಿಡಿಯುವ"** ದಂಡನೆ ವಿಧಿಸಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/689/ಗ್ರಾಪಂಕಾ/2016, ಬೆಂಗಳೂರು, ದಿನಾಂಕ:08-02-2019.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಬಿ.ಭರಮಪ್ಪ, ಹಿಂದಿನ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರ ವಿರುದ್ಧ ಆಪಾದನೆ ಸಾಬೀತಾಗಿರುವುದರಿಂದ ಹಾಗೂ ಇವರು ಸರ್ಕಾರಿ ಸೇವೆಯಿಂದ ಈಗ ನಿವೃತ್ತರಾಗಿರುವ ಕಾರಣ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214(1)(a) ರಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಸದರಿಯವರ **"ಪಿಂಚಣಿಯಲ್ಲಿ ಶೇ.05 ರಷ್ಟು ಮೊತ್ತವನ್ನು 10 ವರ್ಷಗಳ ಅವಧಿಯವರೆಗೆ ತಡೆಹಿಡಿಯುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
11/2/19
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**<u>ಗೆ,</u>**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ಅಪರ ನಿಬಂಧಕರು, ವಿಚಾರಣೆಗಳು-09, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ದಾವಣಗೆರೆ, ದಾವಣಗೆರೆ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಜಗಳೂರು, ದಾವಣಗೆರೆ ಜಿಲ್ಲೆ.
7. ಶ್ರೀ ಬಿ.ಭರಮಪ್ಪ, ಹಿಂದಿನ ಕಾರ್ಯದರ್ಶಿ, ಹನುಮಂತಾಪುರ ಗ್ರಾಮ ಪಂಚಾಯತಿ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ.
8. ಗಣಕ ಕೋಶ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.